ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



# ಎರಡು ಸಾರಿ ಜೀವಿಸಿದ ಹುಡಿಗಿ

ಬರಹಗಾರರು: Edward Hughes

ಚಿತ್ರಲೇಖಕರು: Janie Forest

ಅಳವಡಿಸುವವರು: Ruth Klassen

ಪದ್ಮಾ ಸ್ಟೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯಾಯಿರನು ಯಹೂದ್ಯರನಾಯಕನಾಗಿದ್ದು ದೇವರ ವಾಕ್ಯಗಳನ್ನು ಬೇರೆಯವರಿಗೆ ಕಲಿಸುತ್ತಿದ್ದನು. ಒಂದು ದಿನ ಅವನು ಭಯಂಕರವಾದ ತೊಂದರೆಗೊಳಗಾದನು, ಅವನ ಪ್ರೀತಿಯ ಮಗಳು ರೋಗಸ್ಥಳಾದಳು. ಆ ರೋಗವು ಭಯಂಕರವಾಗಿರುವುದರಿಂದ ಯಾರು ಸಹಾಯ ಮಾಡುವುದಕ್ಕೆ ಮುಂದೆ ಬರಲಿಲ್ಲ, ಕಂಡಿತವಾಗಿ ಅವಳು ಸಾಯುತ್ತಾಳೆಂದು ಯಾಯಿರನು ತಿಳಿದುಕೊಂಡಿದ್ದನು.



ಒಬ್ಬನಿಂದ ಮಾತ್ರವೇ ನನ್ನ ಮಗಳು ಬದುಕುವುದಕ್ಕೆ ಸಾದ್ಯವೆಂದು ಯಾಯಿರನು ತಿಳಿದು ಯೇಸುವನ್ನು ತನ್ನ ಮನೆಗೆ ಕರೆದುಕೊಂಡು ಬರುವುದಕ್ಕೆ ಅವನನ್ನು ಹುಡುಕುತ್ತ ಹೋದನು. ಧರ್ಮದ ನಾಯಕರು ಇದನ್ನು ಕಂಡಿತವಾಗಿ ಯೇಸುವಿನ ಅಗಮನವನ್ನು ಒಪ್ಪುವುದಿಲ್ಲ ಎಂದು



ಯಾಯಿರನು ತಿಳಿದಿದ್ದನು. ಆದರೆ ಯಾಯಿರನು ಹೆದರದೆ ಅವನ ಮಗಳು ಗುಣವಾಗಬೇಕೆಂದು ಬಯಸಿದನು.



ಯಾಯಿರನು ಜನಗಳ
ಮದ್ಯದಲ್ಲಿರುವ
ಯೇಸುವನ್ನು ಕಂಡು
ಆತನ ಮುಂದೆ
ಮೊಣಕಾಲೂರಿದನು.
ಸ್ವಾಮಿ ನನ್ನ ಒಬ್ಬಳೆ
ಮಗಳು ರೋಗಕ್ಕೆ
ತುತ್ತಾಗಿ ಸಾಯುವ
ಅಂಚಿನಲ್ಲಿದ್ದಳೆ ನೀನು
ಬಂದು ನಿನ್ನ ಕೈನೀಡಿ ನನ್ನ
ಮಗಳನ್ನು ಮುಟ್ಟಿದರೆ
ಗುಣವಾಗುವಳು ಎಂದು

ಬೇಡಿಕೊಂಡನು.



ಯೇಸು ಯಾಯಿರನ ಜೋತೆಯಲ್ಲಿ ಹೋದನು ಆದರೆ ಜನಗಳ ಒತ್ತಡ ಜಾಸ್ತಿ ತುಂಬಾ ಇದ್ದುದರಿಂದ ಬೇಗನೆ ಹೋಗುವುದಕ್ಕೆ ಆಗಲಿಲ್ಲ. ಹನ್ನೆರೆಡು ವರ್ಷಗಳಿಂದ ರೋಗಿಯಾಗಿ ಎಲ್ಲಾ ವೈದರನ್ನು ನೋಡಿದರು ಗುಣವಾಗದೆ, ಇರುವಂತ ಎಲ್ಲಾ ಹಣವೆಲ್ಲಾ ಕಳೆದುಕೋಂಡರು ಸಹ ಅವಳಿಗೆ ಗುಣವಾಗಿರಲಿಲ್ಲ. ಹಿಗಿದ್ದಾಗ ಅವಳು ಯೇಸುವನ್ನು ಹೇಗೆ ನೋಡಬಹುದು?



ಆ ಸ್ತ್ರೀಯು ಏನನ್ನು ಮಾಡಬಹುದು? ಒಂದುವೇಳೆ ಆತನ ಉಡುಪನ್ನು ಮುಟ್ಟಿದರೆ ಅವಳಿಗೆ ಗುಣವಾಗಬಹುದು ಅಂದುಕೊಂಡು ಯೇಸುವಿನ ಉಡುಪಿನ ಗೊಂಡೆಯನ್ನು ಮುಟ್ಟಿದಳು.



ಅಲ್ಲಿ ಅದ್ಭುತ ನಡೆಯಿತು!! ಆ ಸ್ತ್ರೀಯಳಿಗೆ ಗುಣವಾಯಿತು. ಅವಳು ಸಂಪೂರ್ಣವಾಗಿ ಸರಿಯಾದೆನೆಂದು ಅಂದುಕೊಂಡಳು.

ಅಲ್ಲಿಂದ ಒಂದು ದ್ವನಿ ಬಂತು ಯೇಸುವು ‘ಯಾರು ನನ್ನನ್ನು ಮುಟ್ಟಿದರೆಂದು ಕೇಳಿದನು?’ ಆಗ ಆ ಸ್ತ್ರೀಯು ತನಗಾದಂತಹ ಎಲ್ಲಾ ಸಂಗತಿಯನ್ನು ಯೇಸುವಿಗೆ ತಿಳಿಸಿದಳು.



ಹಾಗೆ ಯೇಸುವು ಮಾತಾಡುತ್ತ
ಇರುವಾಗ ಯಾಯಿರನ ಸೇವಕರು
ಬಂದು ನಿನ್ನ ಮಗಳು ಸತ್ತು
ಹೋದಳು ಅಂದರು.
ಯಾಯಿರನು ಮುದ್ದಾದ
ಮಗಳನ್ನು ಕಳೆದುಕೊಂಡನು.

ಆ ಮಾತನ್ನು ಕೇಳಿದ ಯೇಸುವು ಭಯಪಡಬೇಡ ನಂಬಿಕೆ ಮಾತ್ರವಿರಲಿ, ಅವಳು ಬದುಕುವಳು ಅಂದನು. ಆದರೆ ಯಾಯಿರನ ಮಗಳು ಸತ್ತು ಹೋದುದ್ದರಿಂದ ಅವನಿಗೆ ಯೇಸುವನ್ನು ನಂಬುವುದಕ್ಕೆ ಎಷ್ಟೋ ಕಷ್ಟವಾಗಿರಬಹುದು.



ಆ ಮನೆಯಲ್ಲಿ ಎಲ್ಲಾರು ಅಳುತ್ತ ಮತ್ತು ಗೋಳಾಡುತ್ತ ಇರುವಾಗ ಯೇಸುವು ಅವರಿಗೆ 'ಅಳಬೇಡಿರಿ ಅವಳು ಸತ್ತಿಲ್ಲ ನಿದ್ದೆ ಮಾಡುತ್ತ ಇದ್ದಾಳೆ' ಎಂದಾಗ ಎಲ್ಲಾರು ಯೇಸುವನ್ನು ನೋಡಿ ನಗೆಯಾಡಿದರು. ಏಕೆಂದರೆ ಅವಳು ಸತ್ತು ಹೋಗಿದ್ದಾಳೆಂದು ಅವರಿಗೆ ಗೊತ್ತಿತ್ತು.



ಯೇಸುವು ಎಲ್ಲಾರನ್ನು ಹೊರಗೆ ಕಳಿಸಿ ಆ ಹುಡಿಗಿಯ ಕೈಯನ್ನು ಹಿಡಿದಿ ‘ಅಮ್ಮಣ್ಣಿ ಏಳು’ ಎಂದನು ಆ ಹುಡಿಗಿ ಎದ್ದಳು.



ಯೇಸುವಿನ ಮೂರು ಶಿಷ್ಯರು,
ಯಾಯಿರನು ಮತ್ತು ಅವನ
ಹೆಂಡತಿ ಮಾತ್ರವೆ ಒಳಗೆ ಇದ್ದರು,
ಆ ಸತ್ತ ಹುಡಿಗಿಯು ಸೇರಿ ಎಲ್ಲರು
ಯೇಸುವಿನ ಮಾತನ್ನು ಕೇಳಿದರಾ?



ಆ ಸತ್ತ ಹುಡಿಗಿಯು
ಯೇಸುವಿನ ಮಾತನ್ನು
ಕೇಳಿದಳು. ಆವಳ
ಆತ್ಮವು ತಿರುಗಿ
ಅವಳಲ್ಲಿ ಸೇರಿತು,
ಸಾವಿನಿಂದ ಮೇಲಕ್ಕೆ
ಎದ್ದಳು.



ಆ ಹುಡುಗಿಯ ತಂದೆ ತಾಯಿಯೂ ಆಶ್ಚರ್ಯಚಕಿತರಾದರು, ಯೇಸು ಅವರಿಗೆ ‘ಏನಾದರು ಅವಳಿಗೆ ತಿನ್ನುವುದಕ್ಕೆ ಕೊಡಿರಿ’ ಎಂದನು. ಅವರ ಮಗಳು ತಿರುಗಿ ಬದುಕಿ ಬಂದಿದ್ದರಿಂದ ಅವರು ಯೇಸುವಿಗೆ ಎಷ್ಟು ಸಂತೋಷ, ಕೃತಜ್ಞತೆವುಳ್ಳವರಾಗಿರಬಹುದು. ಯೇಸುವಿನ ಅತಿಶಯವಾದ ಪ್ರೀತಿ ಮತ್ತು ಶಕ್ತಿ ಅವಳನ್ನು ಮರಣದಿಂದ ಎಬ್ಬಿಸಿತು.



ಎರಡು ಸಾರಿ ಜೀವಿಸಿದ ಹುಡಿಗಿ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮಾರ್ಕ 5, ಲೂಕ 8

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16